ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಸನ್ಯಾಸಿಯಾಗಲು ಆತನಿಗೆ ಏನು ಅರ್ಹತೆ ಇರಬೇಕು?*



ಏನೇ ಹೊಲಸು ಮಾಡಿದರೂ ಕ್ಯಾಮರಾದ ಕಣ್ಣಿಗೆ ಕಾಣದಂತೆ ಮಾಡುವ ಅರ್ಹತೆಯೊಂದೇ ಸಾಕು!

ಶೋಭಾ ಎಂ.ಆರ್. ಹಾಸನ

*ಬಸ್ಸಿನಲ್ಲಿ ಪ್ರಯಾಣಿಸುವಾಗ ಕಿರಿಕಿರಿ ಮಾಡುವ ಪುಂಡ ಹುಡುಗರಿಗೆ ನಿಮ್ಮ ಕಿವಿಮಾತೇನು?*

ಚಿಲ್ರೆ ಇರಬೇಕಾದ್ದು ಜೇಬಿನಲ್ಲಿ ಕಣ್ರೋ, ಬುದ್ಧಿಯಲ್ಲಿ, ನಡತೆಯಲ್ಲಿ ಅಲ್ಲ!

ಗೀತಾ ಬರ್ಲ, ಬೆಂಗಳೂರು

*ಪ್ರೇಮಿಸಿ ವಿವಾಹವಾದರೂ ಜೀವನದಲ್ಲಿ ಎಡವಿ ಬೀಳುವುದು ಏಕೆ?*

ಅಂತಹ ವಿವಾಹಗಳು ಷುಗರ್ ಕೋಟೆಡ್ ಪಿಲ್ಸ್ ಇದ್ದಂತೆ. ಮೇಲಿನ ಸಿಹಿಯ ಭ್ರಮೆ ಚೀಪಿದ ನಂತರ ವಾಸ್ತವ ಕಹಿಯೋ ಕಹಿ!

ಚೈತ್ರಾ ಕುಕ್ಕೆಮನೆ, ಬೆಂಗಳೂರು

*ಇಲ್ಲೊಬ್ಬಳು ಕಾಲಿಗೆ ಚಪ್ಪಲಿ ಹಾಕಿ ಓಡಾಡುವ ಬದಲು ಚಪ್ಪಲಿಯನ್ನು ಕೈಗೆ ಹಾಕಿಕೊಂಡಿದ್ದಾಳಲ್ಲಾ...?*



ಕಾಲಿಗೆ ಷೂ ಧರಿಸುತ್ತಾಳಂತೆ. ಚಪ್ಪಲಿ ಕೈಗೆ ಹಾಕಿಕೊಂಡಿರುವುದಲ್ಲ, ಹಿಡಿದಿರುವುದು. ಯಾರೋ ಅಸಭ್ಯವಾಗಿ ಚುಡಾಯಿಸಿದ್ದಾರಂತೆ,

ಆರಿಫ್, ದಾವಣಗೆರೆ

*ಸತ್ಯ, ನ್ಯಾಯ, ನೀತಿ, ಧರ್ಮ, ಅಹಿಂಸೆ; ಈ ಐದು ಮೌಲ್ಯಗಳಲ್ಲಿ ಉತ್ತಮವಾದ ಮೌಲ್ಯ ಯಾವುದು?*

ಧರ್ಮವೊಂದೇ ಮೌಲ್ಯ ಅದರಲ್ಲೂ ಮಾನವಧರ್ಮ. ಮಿಕ್ಕ ಮೌಲ್ಯಗಳೆಲ್ಲಾ ಅದರ ಅಡಿಯಾಳು!

ಎಂ.ಎನ್. ಸೋಮಶೇಖರ್, ಮೈಸೂರು

*ಜೇಡ ಕಟ್ಟಿದ ಬಲೆಗೂ, ಬೇಡ ಹಾಕಿದ ಬಲೆಗೂ ಏನು ವ್ಯತ್ಯಾಸ?*

ಜೇಡರ ಬಲೆ ಆರ್ಕಿಟೆಕ್ಟ್ ಡಿಸೈನ್ಡ್ ಮನೆಗಳಂತೆ; ಒಂದೊಂದೂ ವೈವಿಧ್ಯಮಯ. ಬೇಡರ ಬಲೆ ಕ್ವಾರ್ಟರ್ಸ್‌ನಂತೆ ಏಕವಿನ್ಯಾಸ.

ಆರ್. ಮಧುಸೂದನ್, ಹಾಸನ

*ಹೆಣ್ಣಿಗೂ, ಹಣ್ಣಿಗೂ ವ್ಯತ್ಯಾಸವೇನು?*

ಹಣ್ಣನ್ನು ನುಂಗುವಂತೆ ನೋಡಬಹುದು, ಹೆಣ್ಣನ್ನು ನುಂಗುವಂತೆ ನೋಡುವಂತಿಲ್ಲ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ದುಡಿಯುವವಗೆ ಬೆವರೇ ದೇವರು ಎಂದೇಕೆ ಹೇಳುವರು?*

ಹೇಳಿಕೆ ಸರಿಯಲ್ಲ; ಟಾಲ್ಕಂ ಪೌಡರ್‌ರವರಿಗೆ, ಡಿಯೋಡೊರೆಂಟ್ ಕಂಪನಿಗಳಿಗೆ (ಇತರರ) ಬೆವರೇ ದೇವರು!

ಕುಮಾರ ಚಲವಾದಿ, ಹೊಳೆನರಸಿಪುರ

*ಹೆಣ್ಣಿಗೆ ಹಠ, ಗಂಡಿಗೆ ಚಟ ಇರಬಾರದು ಎನ್ನುತ್ತಾರಲ್ಲಾ, ಏಕೆ?*

ಅವಳ ಹಠದಿಂದ ಇವನು ಮಠಕ್ಕೆ, ಇವನ ಚಟದಿಂದ ಅವಳು ಚಟ್ಟಕ್ಕೆ ಹೋಗುವ ಸಾಧ್ಯತೆ ಇರುವುದರಿಂದ.

ಗಣೇಶ ಎಂ. ಪೈ, ಚಿಕ್ಕಮಗಳೂರು

*ನಮ್ಮ ಮನೆಗೆ ಬಂದ ಅತಿಥಿಗಳು ಊರಿಗೆ ಬಂದಾಗ ಭೇಟಿಯಾಗದೆ ಹೋಗಬೇಡಿ ಎಂದು, ಅಲ್ಲಿ ನೋಡಿದರೂ ನೋಡದಂತೆ ಹೋಗಿಬಿಡುವರಲ್ಲಾ?*

ಛೆ! ಬಾಯ್ ಮಾತಿಗೆ ಅಂದದ್ದಕ್ಕೆ ನೀವು ಬ್ಯಾಗ್ ಸಮೇತ ಹೋಗಿಬಿಡುವುದೇ! ನಿಮ್ಮದೇ ತಪ್ಪು.

ಡಿ.ಎಸ್. ಪಂಕಜ ಸುಬ್ರಮಣ್ಯ, ಬೆಂಗಳೂರು

*ತಾಯಿಯ ಅಪ್ಪುಗೆಯಲ್ಲಿ ಬೆಳೆಯುವ ಮಕ್ಕಳು ವಯಸ್ಸಿಗೆ ಬಂದಮೇಲೆ ತಿರುಗಿ ಬೀಳುವುದೇಕೆ?*

ಹದಿಹರೆಯದಲ್ಲೂ ಮಕ್ಕಳು ತಿರುಗಿಬೀಳದಿದ್ದರೆ ಇನ್ಯಾವಾಗ ಬಿದ್ದಾರು ಬಿಡಿ; ತಿಕ್ಕಲುತನಕ್ಕೆ ಟೀನೇಜೇ ಲೈಸೆನ್ಸು!

ಆರ್. ನಾಗರಾಜ್, ಗೊರೂರು

*ರಾಖಿ ಕಟ್ಟಿಸಿಕೊಂಡ ಮೇಲೂ ಈ ಕೈ ನನ್ನದಲ್ಲ ಅಂತ ವಾದಿಸೋ ತುಂಟರು ಇರ್ತಾರಲ್ವಾ...?*

ರಾಖಿ ಅಷ್ಟೇ ಅಲ್ಲ, ರಾಖಿ ಸಾವಂತಳನ್ನು ಕಟ್ಟಿಕೊಂಡ ಮೇಲೂ ಹಾಗೆ ಹೇಳುವವರು ಇದ್ದಾರೆ!

## ಬಹುಮಾನಿತ ಪ್ರಶ್ನೆ

ಹಾಡ್ಯ ಬಿ. ಜಯಾನಂದ, ಮೈಸೂರು

*ಸಂಸಾರ ನಿಭಾಯಿಸುವುದು ಕೆಲವರ ಅಭಿಪ್ರಾಯದಲ್ಲಿ ಸರ್ಕಸ್ಸು, ಇನ್ನು ಕೆಲವರ ಅಭಿಪ್ರಾಯದಲ್ಲಿ ತಪಸ್ಸು. ನೀವೇನಂತೀರಿ?*

ಸತಿ ರಿಂಗ್‌ಮಾಸ್ಟರ್ ಆದರೆ ಸರ್ಕಸ್ಸು, ಮೇಕಪ್‌ನಲ್ಲೇ ಕಾಲ ಕಳೆದರೆ ತಪಸ್ಸು!

ಎನ್.ಎಸ್. ಆನಂದ್, ಕತ್ತರಗುಪ್ಪ

*ಗಂಡಸರಿಗಿಂತ ಹೆಂಗಸರೇ ಬುದ್ಧಿವಂತರಾಗಿರುವುದು ಏಕೆ?*

ಆಡುವಾಳ್ಳಕೇ ಮತಿ ಉಂಡೇದಿ ಎನ್ನುತ್ತಾರೆ ತೆಲುಗರು. ಇಂದುಮತಿ, ಬಾನುಮತಿ, ಚಂದ್ರಮತಿ, ಶ್ರೀಮತಿ... ಮತಿ ಇರುವುದೇ ಅವರಲ್ಲಿ!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ

*1942ರಲ್ಲಿ ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ ಎಂದೆವು. 2013ರಲ್ಲಿ ಯಾರನ್ನು ತೊಲಗಿ ಎಂದು ಕೂಗಬೇಕು ರಾಮ್?*

ಕೂಗಿ ಏನು ಪ್ರಯೋಜನ ಬಿಡಿ. ಮಹಾತ್ಮ ಗಾಂಧಿ ಕಾಲದಲ್ಲಿ ತೊಲಗಿಸಬಹುದಿತ್ತು, ಈಗ ನಾವೇ ತೊಲಗಬೇಕಷ್ಟೆ!

ವಿ. ಹಮೀದ್, ವಿಟ್ಲ

*ಹೊಸತಾಗಿ ಲವ್ ಮಾಡುವವರಿಗಾಗಿ ಒಂದು ಕೋಚಿಂಗ್ ಕ್ಲಾಸ್ ಪ್ರಾರಂಭಿಸುವಾಸೆ ನನಗಿದೆ. ನಿಮ್ಮ ಅಭಿಪ್ರಾಯವೇನು?*




ಮಾಡಿ! ನಿಮ್ಮ ಶ್ರೀಮತಿಯವರೇ ಮೊದಲ ಸ್ಟೂಡೆಂಟ್ ಅಂತೆ, ಕಂಗ್ರಾಜುಲೇಷನ್ಸ್, ಬೆಸ್ಟ್ ಆಫ್ ಲಕ್!

ವಿ. ಹೇಮಂತಕುಮಾರ, ಬೆಂಗಳೂರು

*ಪ್ರೀತಿ ಎನ್ನುವುದು ಬಿಸಿಲ್ಗುದುರೆಯೋ, ಮಾಯಾಮೃಗವೋ?*

ಪ್ರೀತಿ ಲಗೇಜ್, ಹೃದಯ ಅದರ ವೆಹಿಕಲ್, ಪ್ರಿಯಕರ/ಪ್ರೇಯಸಿ ಮಾಯಾಮೃಗ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಬಾಳನ್ನು ಕನ್ನಡಿಗೆ ಯಾಕೆ ಹೋಲಿಸುತ್ತಾರೆ ಗುರುಗಳೇ?*

ಮೊದಲು ಪಾದರಸದಂತಿದ್ದು, ನಂತರ ಅವರಿವರ ಹುಳುಕುಗಳನ್ನೇ ಎತ್ತಿ ತೋರಿಸುವುದರಿಂದ.

■ ರಾಮ್